## ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 58(168)

ಮಾನ್ಯ ಸದಸ್ಯರ ಹೆಸರು : ಶ್ರೀ ಅರುಣ ಶಹಾಪುರ(ಶಿಕ್ಷಕರ ಕ್ಷೇತ್ರ)

ಉತ್ತರಿಸುವ ದಿನಾಂಕ : 01.02.2021

ಉತ್ತರಿಸುವ ಸಚಿವರು : ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಹಾಗೂ ಸಕಾಲ ಸಚಿವರು.

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ಅನುದಾನಿತ ಪ್ರಾಥಮಿಕ, ಪ್ರೌಢ ಶಾಲೆ ಹಾಗೂ ಪದವಿ ಪೂರ್ವ ಹಾಗೂ ಪದವಿ ಕಾಲೇಜುಗಳಲ್ಲಿ ಖಾಲಿ ಹುದ್ದೆ ಭರ್ತಿ ಮಾಡುವ ಕುರಿತಂತೆ ಆರ್ಥಿಕ ಇಲಾಖೆಯ ಆರ್ಥಿಕ ಮಿತವ್ಯಯದ ಆದೇಶ ಹೊರಡಿಸಿ ಹುದ್ದೆ ಭರ್ತಿ ಮಾಡುವುದನ್ನು ತಡೆಹಿಡಿಯಲಾಗಿದೆಯೇ; ಯಾವಾಗ ತಡೆಹಿಡಿಯಲಾಗಿದೆ;(ಆದೇಶವನ್ನು ಒದಗಿಸುವುದು) | ಹೌದು.<br>ಸರ್ಕಾರದ ಸುತ್ತೋಲೆ ಸಂಖ್ಯೆ:ಆಇ 157 ವೆಚ್ಚ-8/2020 ದಿನಾಂಕ:10.06.2020ರಲ್ಲಿ ಆರ್ಥಿಕ ಮಿತವ್ಯಯದ ಕ್ರಮಗಳನ್ನು ಜಾರಿಮಾಡಲಾಗಿದೆ. ಸುತ್ತೋಲೆಯ ಪ್ರತಿ ಲಗತ್ತಿಸಿದೆ. |
| ಆ | ಈಗಾಗಲೇ ಆರ್ಥಿಕ ಇಲಾಖೆಯ ಅನುಮತಿ ನೀಡಿರುವ ಹುದ್ದೆಗಳಿಗೆ ಅನುದಾನ ಒದಗಿಸಲು ಇರುವ ತೊಂದರೆ ಏನು; | ಆರ್ಥಿಕ ಇಲಾಖೆಯು ಹೊರಡಿಸಿರುವ ಸುತ್ತೋಲೆ ಸಂ:ಆಇ - 157 ವೆಚ್ಚ-8/2020,ದಿ:10/06/2020ರನ್ವಯ ಆರ್ಥಿಕ ಮಿತಯವ್ಯದ ಕ್ರಮವು ಅನುಷ್ಠಾನದಲ್ಲಿರುವುದರಿಂದ ಎಲ್ಲಾ ಶಾಲಾ ಕಾಲೇಜುಗಳಲ್ಲಿನ ಎಲ್ಲಾ ಹಂತದ ನೇಮಕಾತಿಯನ್ನು ತಡೆಹಿಡಿಯಲಾಗಿರುತ್ತದೆ. |
| ಇ | ಈ ಆದೇಶದಿಂದ ಅನುದಾನಿತ ವ್ಯವಸ್ಥೆಯ ಈ ಎಲ್ಲ ನೌಕರರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ. |
| ಈ | ಈ ಆರ್ಥಿಕ ಮಿತವ್ಯಯದ ಆದೇಶವನ್ನು ಹಿಂಪಡೆಯುವಂತೆ ಮುಖ್ಯಮಂತ್ರಿಗಳಿಗೆ ಶಾಸಕರ ಒತ್ತಡಗಳು ಬಂದಿದೆಯೇ; ಪ್ರತಿಯೊಂದು ಪತ್ರದ ವಿವರ ಹಾಗೂ ಪ್ರಸ್ತಾವನೆಗಳ ವಿವರವನ್ನು ಒದಗಿಸುವುದು; | ಬಂದಿದೆ.<br>ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ವಿವಿಧ ಕಾರಣಗಳಿಂದ ದಿನಾಂಕ:31/12/2015ರ ಪೂರ್ವದಲ್ಲಿ ಖಾಲಿಯಾದ |
| | ಮುಖ್ಯಮಂತ್ರಿಗಳ ಷರಾಸಹಿತ ಕಡತವು ಯಾವ ಹಂತದಲ್ಲಿದೆ; | ಹುದ್ದೆಗಳನ್ನು ಭರ್ತಿಮಾಡಿಕೊಳ್ಳಲು ಅವಕಾಶ ಕಲ್ಪಿಸಿರುವುದಕ್ಕೆ ಅನುಕೂಲವಾಗುವಂತೆ ಬಾಕಿ ಉಳಿದ ಪ್ರಸ್ತಾವನೆಗಳಿಗೆ ಆರ್ಥಿಕ ಮಿತವ್ಯಯ ಸಡಿಲಿಕೆ ನೀಡುವ |

| | | |
|---|---|---|
| | | ಬಗ್ಗೆ ಪ್ರಸ್ತಾಪಿಸಿ, ಆರ್ಥಿಕ ಇಲಾಖೆಯ ಸಹಮತಿ ಕೋರಲಾಗಿದ್ದು, ದಿನಾಂಕ:15/10/2020ರಂದು ನೀಡಿರುವ ಅಭಿಪ್ರಾಯ ಈ ಕೆಳಕಂಡಂತಿದೆ.<br>"The administrative department proposal has been examined. As the fiscal position of the state is in such state that creating more commitment on revenue expenditure is not viable, the ban on appointments under grant-in –aid for the primary and secondary education department is necessary in the interest of the fiscal discipline. Hence, the administrative department proposal for relaxation for appointments cannot be considered.<br>(Approved by Hon'ble Chief Minister)". |
| ಉ) | ಈಗಾಗಲೇ ಆರ್ಥಿಕ ಇಲಾಖೆಯು ಅನುಮತಿ ನೀಡಿ ಹುದ್ದೆ ಭರ್ತಿ ಮಾಡಲು ಸಹ ಅನುಮತಿ ನೀಡಿರುವ ಕಡತಗಳಿಗೆ ವೇತನ ಒದಗಿಸಲು ಸರ್ಕಾರ ಮುಂದಾಗುವುದೇ; ಆರ್ಥಿಕ ಮಿತವ್ಯಯದ ಆದೇಶವನ್ನು ಯಾವಾಗ ಹಿಂಪಡೆಯಲಾಗುವುದು? | ರಾಜ್ಯದ ಆರ್ಥಿಕ ಸ್ಥಿತಿಯು ಸುಸ್ಥಿತಿಗೆ ಬಂಧ ನಂತರ ಆರ್ಥಿಕ ಮಿತವ್ಯದ ಆದೇಶವನ್ನು ಹಿಂಪಡೆಯುವ ಬಗ್ಗೆ ಪರಿಶೀಲಿಸಲಾಗುವುದೆಂದು ಆರ್ಥಿಕ ಇಲಾಖೆಯು ತಿಳಿಸಿರುತ್ತದೆ. |

ಸಂ:ಇಪಿ 45 ಎಸ್‌ಇಎಸ್ 2021

(ಎಸ್ ಸುರೇಶ್ ಕುಮಾರ್)
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ
ಹಾಗೂ ಸಕಾಲ ಸಚಿವರು